aglasem.com

Karnataka Open School

SAMPLE PAPER

KOS



ಪ್ರಥಮ ಭಾಷೆ — ಕನ್ನಡ

FIRST LANGUAGE — KANNADA

(ಹೊಸ ಪಠ್ಯಕ್ರಮ)

(New Syllabus)

ಸಮಯ : ಮಧ್ಯಾಹ್ನ 2.00 ರಿಂದ 5.00 ರವರೆಗೆ] [ಪರಮಾವಧಿ ಅಂಕಗಳು : 125

Time : 2.00 P.M. to 5.00 P.M.] [Maximum Marks : 125

ಸೂಚನೆಗಳು : i) ಎಲ್ಲಾ ಪ್ರಶ್ನೆಗಳ ಉತ್ತರಗಳನ್ನು ಉತ್ತರ ಪತ್ರಿಕೆಯಲ್ಲಿಯೇ ಬರೆಯಿರಿ.

ii) ಪ್ರಶ್ನೆ ಮತ್ತು ಉಪ–ಪ್ರಶ್ನೆಗಳ ಸಂಖ್ಯೆಯನ್ನು ಸರಿಯಾಗಿ ಬರೆಯಿರಿ.

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ***ಒಂದೊಂದು*** ಪದದಲ್ಲಿ ಉತ್ತರಿಸಿ : $6 \times 1 = 6$

1) ಕವಿ ಅಂಬಿಕಾತನಯದತ್ತರು ದುಃಖವನ್ನು ಯಾವುದಕ್ಕೆ ಹೋಲಿಸಿದ್ದಾರೆ ?

2) ಯಾವುದರಿಂದ ಚಿಂತೆಯನ್ನು ದೂರ ಮಾಡಬಹುದು ?

3) ಗೋಗ್ರಹಣದ ಸುದ್ದಿಯನ್ನು ತಂದವರು ಯಾರು ?

4) 1960 ರಲ್ಲಿ ಒಲಂಪಿಕ್ ಕ್ರೀಡೆಗಳು ಎಲ್ಲಿ ಜರುಗಿದವು ?

5) ಲಕ್ಷ್ಮಿಯು ಸಾಕಿದ್ದ ಬೆಕ್ಕಿನ ಮರಿಯ ಹೆಸರು ಏನು ?

6) ಲೇಖಕರು ಸರ್ಕಸ್‌ಗೆ ಹೋದಾಗ ಸಿಕ್ಕಿ ಹಾಕಿಕೊಂಡದ್ದು ಎಲ್ಲಿ ?

II. ಈ ಕೆಳಗೆ ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿ : $6 \times 1 = 6$

1) ಸ್ವತಂತ್ರವಾಗಿ ಉಚ್ಚರಿಸಲ್ಪಡುವ ಅಕ್ಷರಗಳಿಗೆ ..... ಅಕ್ಷರಗಳೆನ್ನುವರು.

2) ರಾಕ್ಷಸರಿಬ್ಬರೂ ..... ಕತ್ತನ್ನು ಕತ್ತರಿಸಿದ್ದರಿಂದ ಸತ್ತರು.

3) ಶರಣರ ಗುಟ್ಟನ್ನು ..... ನೋಡು.

4) ಮತದ ಬಿರುಕುಗಳನು ..... ನುಡಿಗಳೊಡಕುಗಳನು ಮರೆವ.

5) ಅತಿಮಬ್ಬೆ ತೈಲನ ಜನನಿ ಮಾತ್ರವಲ್ಲ .....ನ ಜನನಿಯೂ ಹೌದು.

6) ಕೋಟಿ ವಿದ್ಯೆಗಳಲ್ಲಿ ..... ವಿದ್ಯೆಯೇ ಲೇಸು.

schools.aglasem.com

aglasem.com

III. ಈ ಕೆಳಗಿನವುಗಳಲ್ಲಿ ಗುಂಪಿಗೆ ಸೇರದ ಪದವನ್ನು ಆರಿಸಿ, ಬರೆಯಿರಿ : $6 \times 1 = 6$

1) ನಂದಾದೀವಿಗೆ, ಮಹಾತ್ಮ ಗಾಂಧಿ, ಸರ್ದಾರ್ ವಲ್ಲಭಬಾಯಿ ಪಟೇಲ್, ಸರೋಜಿನಿ ನಾಯ್ಡು.

2) ಕೊಳಲು, ಪಾಂಚಜನ್ಯ, ಕಲಾಸುಂದರಿ, ಚಿತ್ರಾಂಗದಾ.

3) ಷಡಾನನ, ಸನ್ಮಂಗಳ, ಅಜಂತ, ಸದುತ್ತರ.

4) ಯಮ, ದಾಡೆ, ಮೃತ್ಯು, ಮುಖ.

5) ಮನೆಮಠ, ಊರುಕೇರಿ, ಕಾಫಿತಿಂಡಿ, ಮತ್ತೆಮತ್ತೆ.

6) ಅತ್ತಿತ್ತ, ಒಮ್ಮೊಮ್ಮೆ, ಆಗಾಗ, ಅಲ್ಲಲ್ಲಿ.

IV. ಈ ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ, ಮೂರನಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ : $6 \times 1 = 6$

1) ಪ್ರಪಂಚದ ಬಾಲ್ಯದಲ್ಲಿ : ಅನುವಾದಿತ ಕೃತಿ :: ಶಿಲಾಲತೆ : ..... .

2) ಕಂದ : ಮಾತ್ರಾಗಣ ಛಂದಸ್ಸು :: ಉತ್ಪಲಮಾಲಾ ವೃತ್ತ : ..... .

3) ಮಹೌದಾರ್ಯ : ವೃದ್ಧಿ ಸಂಧಿ :: ಅತ್ಯವಸರ : ..... .

4) ತಲೆಯೆತ್ತು : ಕ್ರಿಯಾ ಸಮಾಸ :: ಕೈನೋವು : ..... .

5) ದನ : ದನಗಳು :: ಕಾರ್ಮಿಕ : ..... .

6) ತಗುಣಾಕೆ : ತಗೆದುಕೊಳ್ಳುವುದಕ್ಕೆ :: ತರ್ಬಕು : ..... .

V. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಕ್ರಮಾಕ್ಷರದೊಂದಿಗೆ ಆರಿಸಿ, ಬರೆಯಿರಿ : $5 \times 1 = 5$

1) ರನ್ನನು ಪದ್ಯದಲ್ಲಿ ಬಳಸಿದ ಭಾಷೆ

ಅ) ಪೂರ್ವದ ಹಳಗನ್ನಡ

ಆ) ಹಳಗನ್ನಡ

ಇ) ನಡುಗನ್ನಡ

ಈ) ಹೊಸಗನ್ನಡ

schools.aglasem.com

aglasem.com

2) ರಸಬಳ್ಳಿಯು ಹಬ್ಬಬೇಕಾದುದು ಹೊಳೆದಂಡೆಯಲ್ಲಿರುವ ಇದರಂತೆ

ಅ) ಗಿಡದ ಚಿಗುರು

ಆ) ಕರಕೀಯ ಕುಡಿ

ಇ) ತೆಂಗಿನ ಮರದ ಬೇರು

ಈ) ಮರದ ಕೊಂಬೆ

3) ನಾವೆಲ್ಲರೂ ಒಂದೇ ತಾಯಿಯ ಎದೆಯಾಸೆಯ

ಅ) ಕುಡಿಗಳು

ಆ) ಕಿಡಿಗಳು

ಇ) ಸಿಡಲ ಮೊಗ್ಗುಗಳು

ಈ) ಶೂರ ಕಲಿಗಳು

4) ಲಂಕೆಯನ್ನು ಬಿಟ್ಟು ಹೋಗಲಾರದ ಆತ್ಮ

ಅ) ಮಂಡೋದರಿ

ಆ) ಸೀತಾದೇವಿ

ಇ) ರಾವಣ

ಈ) ವಿಭೀಷಣ

5) ಹಿಂದೆ ಪಾನನಿರೋಧಕ್ಕೆ ಜನರಲ್ಲಿ ಈ ಭಾವನೆಯಿತ್ತು

ಅ) ಆರೋಗ್ಯಕ್ಕೆ ಒಳ್ಳೆಯದು

ಆ) ತಲೆ ಕಡಿದಷ್ಟು ಕೆಟ್ಟದ್ದು

ಇ) ಹಿರಿಯರ ಸಮ್ಮತಿ

ಈ) ಜೀವನಕ್ಕೆ ಅವಶ್ಯಕ

schools.aglasem.com
aglasem.com

VI. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ***ಒಂದೊಂದು*** ವಾಕ್ಯದಲ್ಲಿ ಉತ್ತರಿಸಿ : $6 \times 1 = 6$

1) ಭರತ ಭೂಮಿಯು ಉಟ್ಟಿರುವ ಉಡುಪು ಯಾವುದು ?

2) ಯುವ ಜನತೆಯನ್ನು ಯಾರಿಗೆ ಹೋಲಿಸಿದ್ದಾರೆ ?

3) ಸರ್ವಜ್ಞನ ದೃಷ್ಟಿಯಲ್ಲಿ ದೇವರು ಯಾರು ?

4) ಅಭಾವ ವೇದಾಂತಿಗಳೆಂದು ಯಾರನ್ನು ಕರೆದಿರುವರು ?

5) ಕೆಂಪಯ್ಯನವರು ತಮ್ಮ ಪ್ರೌಢ ಶಾಲಾ ವ್ಯಾಸಂಗವನ್ನು ಎಲ್ಲಿ ಮಾಡಿದರು ?

6) ಗಾಂಧೀಜಿಯವರ ಬೀಜಮಂತ್ರ ಯಾವುದು ?

VII. a) ಈ ಕೆಳಗಿನ ಪದಗಳನ್ನು ಬಿಡಿಸಿ ಬರೆದು, ಸಂಧಿಯ ಹೆಸರನ್ನು ಬರೆಯಿರಿ : $2 \times 1 = 2$

i) ವಾಗ್ದೇವಿ

ii) ಅಷ್ಟೈಶ್ವರ್ಯ

b) ಈ ಕೆಳಗಿನ ಪದಗಳನ್ನು ವಿಗ್ರಹವಾಕ್ಯ ಮಾಡಿ, ಬರೆದು ಸಮಾಸದ ಹೆಸರನ್ನು ಬರೆಯಿರಿ : $2 \times 1 = 2$

i) ಅಂಗೈ

ii) ಸೊಕ್ಕಾನೆ

c) ಈ ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ : $2 \times 1 = 2$

i) ಮೇರೆ

ii) ತುಹಿನ

d) ಈ ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ : $2 \times 1 = 2$

i) ಫಲ

ii) ಪ್ರಯಾಸ

e) ಈ ಕೆಳಗಿನ ಪದಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ : $2 \times 1 = 2$

i) ನಿಬಿಡ

ii) ಅನರ್ಘ್ಯ

aglasem.com
schools.aglasem.com

VIII. ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ : $5 \times 1 = 5$

ಗೌರೀಶಂಕರವನ್ನು ಮೊಟ್ಟ ಮೊದಲಾಗಿ ತೇನ್‌ಸಿಂಗ್ ನೋರ್ಕೆ ಮತ್ತು ಹಿಲರಿಯವರು ಮೇ 29, 1953 ರಲ್ಲಿ ಏರಿದರು. ಈ 40 ವರ್ಷಗಳಲ್ಲಿ ಹಲವು ಸಾಹಸಿ ತಂಡಗಳು ಗೌರೀಶಂಕರವನ್ನು ಹತ್ತಿವೆ. ಜತೆಯಲ್ಲೇ ಹೊಲೆಗೆಡಿಸಿವೆ. ತೇನ್‌ಸಿಂಗ್ ಮತ್ತು ಹಿಲರಿಯವರ ಶಿಖರಾರೋಹಣ ಯಶಸ್ವಿಯಾಗುವಂತೆ ಮಾಡಿದ ಲಾರ್ಡ್ ಹಂಟ್ ಅಂತೂ ಹಿಮಾಲಯದ ಈ ದುರವಸ್ಥೆ ಕಂಡು ಮಮ್ಮಲ ಮರುಗುತ್ತಾರೆ. 'ಹೆಣಗಳನ್ನು ಅಲ್ಲೇ ಬಿಟ್ಟು ಬರುವುದೆಂದರೆ ಎಂಥ ಕ್ರೌರ್ಯ!' ಎಂದು ಅವರು ಉದ್ಗರಿಸಿದ್ದಾರೆ. ಭಾರತವಲ್ಲದೆ ನೇಪಾಳ, ಯುಗೋಸ್ಲಾವಿಯಾ, ಬ್ರಿಟನ್ ಮೊದಲಾದ ದೇಶಗಳ ಸಾಹಸಿಗಳ ಹೆಣಗಳು ಇಲ್ಲಿವೆ. ಈ ಹೆಣಗಳು ಸಾವಿರಾರು ವರ್ಷ ಕಳೆದರೂ ಕೆಡದಂತೆ ಉಳಿಯಬಹುದು.

'ಗೌರೀ ಶಂಕರದ ದಕ್ಷಿಣ ಭಾಗ ಅತ್ಯಂತ ಕೊಳಕಾಗಿದೆ. ಗೌರೀ ಶಂಕರವನ್ನೇರಿದ, ಪರಿಸರ ಪ್ರೇಮಿಗಳಾದ, ಹಿಮಾಲಯದ ಮೇಲೆ ಭಕ್ತಿ ಗೌರವಗಳಿರುವ ತಂಡದವರೇ ಈ ಗಲೀಜು ಮಾಡಿದ್ದಾರೆ ಎಂಬುದು ಅತ್ಯಂತ ದುಃಖದ ಸಂಗತಿ. ಸುಮಾರು 8000 ಮೀಟರು ವಿಸ್ತಾರಕ್ಕೆ ಈ ತಿಪ್ಪೆಗುಂಡಿ ಬೆಳೆದಿದೆ ಎಂಬುದನ್ನು ಯೋಚಿಸಲು ಸಾಧ್ಯವಿಲ್ಲ' ಎಂಬುದು ಲಾರ್ಡ್‌ಹಂಟ್ ಅವರಂಥ ಹಿಮಾಲಯ ಪ್ರೇಮಿಯ ನೋವಿನ ಮಾತು. 'ಪಾವಿತ್ರ್ಯಕ್ಕೆ ಸಂಕೇತವಾಗಿರುವ ಹಿಮಾಲಯವನ್ನು ಪರಿಶುದ್ಧವಾಗಿಸುವುದು ಸಾಧ್ಯವಿಲ್ಲವೆ ?' ಎಂದು ಲಾರ್ಡ್ ಹಂಟ್ ಕೊರಗುತ್ತಿದ್ದಾರೆ.

ಪ್ರಶ್ನೆಗಳು :

1) ಗೌರೀಶಂಕರವನ್ನು ಮೊಟ್ಟ ಮೊದಲು ಏರಿದವರು ಯಾರು ಯಾರು ಹೆಸರಿಸಿ.

2) ತೇನ್‌ಸಿಂಗ್ ಮತ್ತು ಹಿಲರಿಯವರುಗಳಿಗೆ ಶಿಖರಾರೋಹಣಕ್ಕೆ ಸಹಾಯ ಮಾಡಿದವರು ಯಾರು ?

3) ಹಿಮಾಲಯದ ದುರವಸ್ಥೆಯನ್ನು ಕಂಡು ಲಾರ್ಡ್ ಹಂಟ್ ಏನೆಂದು ಮರುಗಿದ್ದಾರೆ ?

4) ಲಾರ್ಡ್ ಹಂಟ್ ಪ್ರಕಾರ ಹಿಮಾಲಯದಲ್ಲಿ ಸರಿ ಸುಮಾರು ಎಷ್ಟು ಭಾಗದಲ್ಲಿ ಮಲಿನ ವಸ್ತುಗಳು ತುಂಬಿವೆ ?

5) ಹಿಮಾಲಯದ ಯಾವ ಭಾಗ ಹೆಚ್ಚು ಮಲಿನವಾಗಿದೆ ?

schools.aglasem.com
aglasem.com

IX. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ **ಎರಡು** ವಾಕ್ಯಗಳಲ್ಲಿ ಉತ್ತರಿಸಿ : $10 \times 2 = 20$

1) ಶಿಸ್ತಿನ ಸಿಪಾಯಿಗಳ ದಿನಚರಿ ಯಾವುದು ?

2) ಕೆಂಪಯ್ಯನವರು ದೇಶದ ಪ್ರಮುಖ ಆಟಗಾರರಾಗಿ ಅರಳಲು ಕಾರಣವಾದ ಎರಡು ಘಟನೆಗಳನ್ನು ತಿಳಿಸಿ.

3) ಇನ್ಸ್‌ಪೆಕ್ಟರ್‌ರಲ್ಲಿ ಪ್ರಧಾನವಾಗಿ ಎದ್ದು ಕಾಣುವ ಗುಣಗಳಾವುವು ?

4) ನನ್ನೂರಿಗೆ ಯಾವ ಯಾವ ವಸ್ತುಗಳು ಪ್ರವೇಶವನ್ನು ಪಡೆದಿವೆ ?

5) ಕ್ಲೌರಿಕನು ರಾಜನ ಮಗನಿಗೆ ಯಾವ ಭರವಸೆಯನ್ನು ನೀಡಿದನು ?

6) ಕವಿಯು ತಮ್ಮ ಹೆಂಡತಿಯನ್ನು ಯಾವ ರೀತಿ ನೆನಪಿಸಿಕೊಂಡಿದ್ದಾರೆ ?

7) ನವ ಸಮಾಜದ ನಿರ್ಮಾಣಕ್ಕೆ ಕೈಗೊಳ್ಳಬೇಕಾದ ಕಾರ್ಯಗಳೇನು ?

8) ಅನುಗಾಲವು ಯಾವುದರ ಚಿಂತೆ ?

9) ಹುಯ್ಯಲುಗಾರನು ಅರಮನೆಗೆ ಬಂದಾಗ ಆತನ ಸ್ಥಿತಿ ಹೇಗಿತ್ತು ?

10) ಜಗತ್ತು ಅತ್ತಿಮಬ್ಬೆಯನ್ನು ಏನೆಂದು ಹೊಗಳುತ್ತಿದೆ ?

X. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಗುರುತಿಸಿ, ಸಮನ್ವಯಗೊಳಿಸಿ : 3

"ನರತೆಯೆಂಬ ಬಂಗಾರವನರಳಿಸಿ"

XI. ಈ ಕೆಳಗಿನ ಕವಿ / ಲೇಖಕರಲ್ಲಿ ಯಾರಾದರೂ **ನಾಲ್ವರ** ಕಾಲ, ಸ್ಥಳ ಮತ್ತು ಒಂದು ಕೃತಿಯನ್ನು ಬರೆಯಿರಿ : $4 \times 3 = 12$

1) ಸಿಂಪಿ ಲಿಂಗಣ್ಣ

2) ಸಿ.ಕೆ. ವೆಂಕಟರಾಮಯ್ಯ

3) ದ.ರಾ. ಬೇಂದ್ರೆ

4) ಪು.ತಿ. ನರಸಿಂಹಾಚಾರ್

5) ಮಾಸ್ತಿ ವೆಂಕಟೇಶ ಅಯ್ಯಂಗಾರ್

schools.aglasem.com

aglasem.com

XII. ಈ ಕೆಳಗಿನ ಗಾದೆ ಮಾತುಗಳಲ್ಲಿ ಯಾವುದಾದರೂ ***ಎರಡನ್ನು*** ವಿಸ್ತರಿಸಿ ಬರೆಯಿರಿ : $2 \times 3 = 6$

1) ಕೂತು ಉಣ್ಣುವವನಿಗೆ ಕುಡಿಕೆ ಹೊನ್ನು ಸಾಲದು.

2) ದೇಶ ಸುತ್ತಿ ನೋಡು ; ಕೋಶ ಓದಿ ನೋಡು.

3) ಗಿಡವಾಗಿ ಬಗ್ಗದ್ದು, ಮರವಾಗಿ ಬಗ್ಗೀತೇ ?

XIII. ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾರೂ ***ಐದಕ್ಕೆ*** ಆರೆಂಟು ವಾಕ್ಯಗಳಲ್ಲಿ ಉತ್ತರಿಸಿ : $5 \times 4 = 20$

1) ಕಥಾನಾಯಕನ ತಂದೆಯ ಗುಣಸ್ವಭಾವವನ್ನು ತಿಳಿಸಿ.

2) ಫೈರ್ ಅಲಾರಂ ಎಚ್ಚರಿಕೆ ಹೇಗೆ ತೆಗೆದುಕೊಳ್ಳಲಾಗಿತ್ತು ?

3) ಕಪ್ಪೆಯಿಂದ ಪಿಚಕಾರಿ ಹೊಡೆಸಿಕೊಂಡ ಕವಿಯ ಗೋಳನ್ನು ವಿವರಿಸಿ.

4) 'ನನ್ನ ಕವಿತೆ'ಯಲ್ಲಿ ಮೂಡಿಬಂದಿರುವ ಸಾದೃಶ್ಯ ವರ್ಣನೆಯನ್ನು ವಿವರಿಸಿ.

5) ವಚನಕಾರರು ಹೇಳಿದ ಮಾತಿನ ಮಹತ್ವವನ್ನು ವಿವರಿಸಿ.

6) 'ಕೊನೆಯ ಹಾಡು' ಪದ್ಯದ ಸಾರಾಂಶವನ್ನು ಸಂಗ್ರಹಿಸಿ ಬರೆಯಿರಿ.

XIV. ಈ ಪದ್ಯ ಭಾಗದ ಸಾರಾಂಶವನ್ನು ಬರೆಯಿರಿ : 4

ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗ ।
ಳ್ಗಾಗರಮಾದ ಮಾನಿಸರೆ ಮಾನಸರಂತವರಾಗಿ ಪುಟ್ಟಲೇ ।।
ನಾಗಿಯುಮೇನೊ ತೀರ್ದಪು(ದೆ) ತೀರದೊಡಂ ಮಱೆದುಂಬಿಯಾಗಿ ಮೇಣ್ ।
ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ವನವಾಸಿ ದೇಶದೊಳ್ ।।

schools.aglasem.com
aglasem.com

XV. ಈ ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ ***ಒಂದನ್ನು*** ಕುರಿತು ಸುಮಾರು ಹತ್ತು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧವೊಂದನ್ನು ಬರೆಯಿರಿ : $1 \times 5 = 5$

1) ಅತಿವೃಷ್ಟಿಯಿಂದಾಗುವ ಅನಾನುಕೂಲತೆಗಳು

2) ಶೈಕ್ಷಣಿಕ ಪ್ರವಾಸಗಳ ಮಹತ್ವ

3) ಸ್ವಚ್ಛ ಭಾರತ ಆಂದೋಲನದಲ್ಲಿ ಯುವಜನತೆಯ ಪಾತ್ರ

XVI. ನಿಮ್ಮೂರಿಗ ಹೆಚ್ಚುವರಿಯಾಗಿ ಬಸ್ಸನ್ನು ನಿಯೋಜಿಸುವಂತೆ ಕೋರಿ ಸಾರಿಗೆ ಇಲಾಖೆಯ ವಿಭಾಗೀಯ ವ್ಯವಸ್ಥಾಪಕರಿಗೆ ಮನವಿ ಪತ್ರ ಬರೆಯಿರಿ. 5

ಅಥವಾ

ನಿಮ್ಮ ಮುಂದಿನ ಜೀವನದ ಯೋಜನೆಗಳನ್ನು ವಿವರಿಸಿ ಸ್ನೇಹಿತನಿಗೆ ಪತ್ರ ಬರೆಯಿರಿ.

schools.aglasem.com
AglaSem Earn while Learn Program. Send your papers and get paid.
Contact: support@aglasem.com
aglasem.com